# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 204 |
| ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್ |
| ವಿಷಯ | : | ಕಂದಾಯ ಇಲಾಖೆಯಡಿ ಕಾರ್ಯ ನಿರ್ವಹಿಸುವ ಬೆಂಗಳೂರು ಒನ್ ಕರ್ನಾಟಕ ಒನ್,ಇ-ಗೌರ್ವನ್ಸ್ ಕಛೇರಿಗಳ ಗುತ್ತಿಗೆ ಕುರಿತು. |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |
| ಉತ್ತರಿಸುವ ದಿನಾಂಕ | : | 06-12-2023 |

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ಅ) ಕಂದಾಯ ಇಲಾಖೆಯಡಿ ಕಾರ್ಯನಿರ್ವಹಿಸುವ ಬೆಂಗಳೂರು ಒನ್, ನಾಡಕಛೇರಿ, ಸೇವಾ ಸಿಂಧು. ಕರ್ನಾಟಕ ಒನ್ ಇತ್ಯಾದಿ ಕಛೇರಿಗಳ ಗುತ್ತಿಗೆಯನ್ನು ಯಾವ ಯಾವ ಸಂಸ್ಥೆಗಳು ಕಳೆದ ಎಷ್ಟು ವರ್ಷಗಳಿಂದ ನಿರ್ವಹಿಸುತ್ತಾ ಬರುತ್ತಿವೆ:</td><td>
ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದಡಿ ಬರುವ ಯೋಜನೆಗಳಿಗೆ ಗುತ್ತಿಗೆದಾರರನ್ನು ಇ-ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಕರೆದು ಪಡೆಯಲಾಗಿರುತ್ತದೆ ವಿವರ ಈ ಕೆಳಕಂಡಂತಿದೆ;
<table>
<tr><th>ಯೋಜನೆ</th><th>ಟೆಂಡರ್ ಸಾಲು</th><th>ಸಂಸ್ಥೆಗಳು</th></tr>
<tr><td>ಬೆಂಗಳೂರು ಒನ್</td><td>2005-2010<br>2010-2015<br>2015-2021<br>2021-2026</td><td>ಮೆ|| ಸಿ.ಎಂ.ಎಸ್ ಸಂಸ್ಥೆ</td></tr>
<tr><td>ಕರ್ನಾಟಕ ಒನ್</td><td>2010-2015<br>2015-2021<br>2021-2026</td><td>ಮೆ|| ಸಿ.ಎಂ.ಎಸ್ ಸಂಸ್ಥೆ</td></tr>
</table>
ಗ್ರಾಮ ಒನ್ ಯೋಜನೆ ಕಂದಾಯ ವಿಭಾಗವಾರು
<table>
<tr><td>ಬೆಳಗಾವಿ<br>ಬೆಂಗಳೂರು</td><td>2021-2026</td><td>ಮೆ|| ಸಿ.ಎಂ.ಎಸ್ ಸಂಸ್ಥೆ</td></tr>
<tr><td>ಕಲಬುರಗಿ<br>ಮೈಸೂರು</td><td>2021-2026</td><td>ಮೆ| ಬಿ.ಎಲ್.ಎಸ್ ಸಂಸ್ಥೆ</td></tr>
<tr><td>ಜನಸೇವಕ</td><td>2021-2026</td><td>ಮೆ|| ಸಿ.ಎಂ.ಎಸ್ ಸಂಸ್ಥೆ</td></tr>
</table>
ನಾಡಕಛೇರಿ<br>
ಕಂದಾಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ನಾಡ ಕಛೇರಿಗಳಿಗೆ 2012 ರಿಂದ ಹೊರಗುತ್ತಿಗೆ ಆಧಾರದ ಮೇಲೆ ಜಿಲ್ಲಾಧಿಕಾರಿಗಳ ಹಂತದಲ್ಲಿಯೇ ಟೆಂಡರ್ ಕರೆದು ಡಾಟಾ ಎಂಟ್ರಿ ಆಪರೇಟರಗಳನ್ನು ನೇಮಿಸಲು ಕ್ರಮಕೈಗೊಳ್ಳಲಾಗುತ್ತಿದೆ.<br><br>
ತದನಂತರ, ಜನವರಿ 2022 ರಿಂದ ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದಿಂದ ಕೇಂದ್ರಿಕೃತವಾಗಿ ಟೆಂಡರ್
</td></tr>
</table>

| | |
|---|---|
| | ಕರೆಯಲಾಗಿರುತ್ತದೆ.<br><br>ಪ್ರಸ್ತುತ, ಸರ್ಕಾರದ ಆದೇಶ ಸಂಖ್ಯೆ: ಕಂಇ 56 ಎಜೆಎಸ್ 2023 ದಿನಾಂಕ:02-08-2023 ರಂತೆ, ನಾಡ ಕಛೇರಿಗಳಲ್ಲಿ ಕೆಲಸ ನಿರ್ವಹಿಸಿರುವ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಜಿಲ್ಲಾ ಮಟ್ಟದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಟೆಂಡರ್ ಮೂಲಕ ನಿಯಮಾನುಸಾರ ನೇಮಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿರುತ್ತದೆ.<br><br>ಮುಂದುವರೆದು, ಅಟಲ್‌ಜೀ ಜನಸ್ನೇಹಿ ನಿರ್ದೇಶನಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ಸಿಬ್ಬಂದಿ, ಜಿಲ್ಲಾ ಸಮಾಲೋಚಕರು ಹಾಗೂ ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ನಿರ್ದೇಶನಾಲಯದಿಂದಲೇ ಟೆಂಡರ್ ಮೂಲಕ ನೇಮಕಮಾಡಿಕೊಳ್ಳಲು ಕ್ರಮಕೈಗೊಳ್ಳಲಾಗುತ್ತಿದೆ. |
| ಆ) ಇವುಗಳು ರಾಜ್ಯ ಸರ್ಕಾರದ ಇ-ಗವರ್ನೆನ್ಸ್ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದೆಯೇ; | ಬೆಂಗಳೂರು ಒನ್ , ಕರ್ನಾಟಕ ಒನ್ , ಗ್ರಾಮ ಒನ್ ಕೇಂದ್ರಗಳು ಸರ್ಕಾರದ ಇ-ಗವರ್ನೆನ್ಸ್ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿವೆ.<br><br>ನಾಡ ಕಛೇರಿಗಳನ್ನು ಕಂದಾಯ ಇಲಾಖೆಯು ನಿರ್ವಹಿಸುತ್ತಿದೆ. |
| ಇ) ಕಾರ್ಯನಿರ್ವಹಿಸುತ್ತಿದಲ್ಲಿ ಗುತ್ತಿಗೆ ನೀಡಲು ಅನುಸರಿಸುತ್ತಿರುವ ಮಾನದಂಡಗಳೇನು; ಎಷ್ಟು ವರ್ಷಗಳಿಗೊಮ್ಮೆ ಗುತ್ತಿಗೆದಾರರನ್ನು ಬದಲಾವಣೆ ಮಾಡಲಾಗುತ್ತಿದೆ? | ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದೊಂದಿಗೆ (PPP) ಸರ್ಕಾರ ಹಾಗೂ ಸಂಸ್ಥೆಯೊಂದಿಗೆ ಮಾಡಿಕೊಳ್ಳಲಾದ ಒಪ್ಪಂದದನ್ವಯ ಷರತ್ತು ಮತ್ತು ನಿಬಂಧನೆಗಳನುಸಾರ ಕರಾರನ್ನು ಮಾಡಿಕೊಳ್ಳಲಾಗುತ್ತದೆ.<br><br>ಐದು ವರ್ಷಗಳಿಗೊಮ್ಮೆ ಟೆಂಡರ್ ಮೂಲಕ ಗುತ್ತಿಗೆದಾರರನ್ನು ಬದಲಾವಣೆ ಮಾಡಲಾಗುತ್ತದೆ. |

(ಸಿದ್ದರಾಮಯ್ಯ)
ಮುಖ್ಯಮಂತ್ರಿ

ಸಿಆಸುಇ 210 ಇಜಿಎಂ 2023